[Govt. of Karnataka C.R.P. 67]

| |
|---|
| **Deposition Sheets (RP.No.57) Form No.4** |

**IN THE COURT OF PRL. CIVIL JUDGE & J.M.F.C., KARKALA.**

**Criminal Case No. 400-2017**

**ಪಿ.ಡಬ್ಲ್ಯು : 7 ಸಿ.ಡಬ್ಲ್ಯು : 9**

| | | |
|---|---|---|
| ಸಾಕ್ಷಿದಾರನ ಹೆಸರು | : | ತನ್ವೀರ್ ಸಾಹೇಬ್ |
| ತಂದೆಯ ಹೆಸರು | : | ಖುರ್ಷಿದ್ ಸಾಹೇಬ್ |
| ಪ್ರಾಯ | : | 34 ವರ್ಷ |
| ಉದ್ಯೋಗ | : | ಚಾಲಕ |
| ವಾಸ | : | ಮಿಯಾರು |

ದಿನಾಂಕ 26.05.2022 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರುಃ-**

ಸಾಕ್ಷಿಯು ನಿಪಿ-8 ಮತ್ತು 9 ರಲ್ಲಿರುವ ಸಹಿಗಳನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-8(ಬಿ) ಮತ್ತು 9(ಬಿ) ಎಂದು ಗುರುತಿಸಲಾಯಿತು. ದಿಃ14-12-2016 ರಂದು ಮೂಡುಬಿದ್ರೆಯ ಸುಧಾ ಜ್ಯುವೆಲ್ಲರ್ಸ್ ನಲ್ಲಿ ಸಹಿ ಮಾಡಿರುತ್ತೇನೆ. ಪೋಲಿಸರು ನನ್ನನ್ನು ಮತ್ತು ರಮೇಶ್ ಹೆಗ್ಡೆಯನ್ನು ಹಾಗೂ ಈಗ ನ್ಯಾಯಾಲಯದ ಮುಂದಿರುವ ಆರೋಪಿಯನ್ನು ಕರೆದುಕೊಂಡು ಸುಧಾ ಜ್ಯುವೆಲ್ಲರ್ಸ್ ಗೆ ಹೋಗಿದ್ದು, ಅಲ್ಲಿ ಆರೋಪಿಯು ಕಳ್ಳತನ ಮಾಡಿದ ಗೆಜ್ಜೆ, ಕಾಲುಂಗುರ, ಹಾಗೂ ಬೆಳ್ಳಿಯ ಸುಮಾರು 10-15 ವಸ್ತುಗಳು ಇದ್ದು, ಅವುಗಳನ್ನು ಆರೋಪಿಯು ಅಲ್ಲಿ ಮಾರಾಟ ಮಾಡಿರುವುದಾಗಿ ಹೇಳಿದ್ದು, ಪೋಲಿಸರು ಅವುಗಳನ್ನು ವಶಪಡಿಸಿಕೊಂಡಿರುತ್ತಾರೆ. ಸಾಕ್ಷಿಯು ನಿಪಿ-7 ಭಾವಚಿತ್ರದಲ್ಲಿರುವ ಬೆಳ್ಳಿಯ ಹವಳದ ಸರ ಮತ್ತು ಬೆಳ್ಳಿಯ ತಗಡು ನೋಡಿದ ಬಗ್ಗೆ ನನಗೆ ನೆನಪಿರುವುದಿಲ್ಲ. ನಿಪಿ-7 ಭಾವಚಿತ್ರದಲ್ಲಿರುವ ಬಂಗಾರದ ಉಂಗುರ, ಓಲೆಯನ್ನು ವಿ ಆರ್ ಎಸ್ ಫೈನಾನ್ಸಿನಲ್ಲಿ ವಶಪಡಿಸಿಕೊಂಡಿರುತ್ತಾರೆ.

2. ನಂತರ ಮಂಗಳೂರಿನ ವಿ ಆರ್ ಎಸ್ ಫೈನಾನ್ಸ್ ಗೆ ಕರೆದುಕೊಂಡು ಹೋಗಿದ್ದು, ಅಲ್ಲಿ ಚಿನ್ನವನ್ನು ಆರೋಪಿಯು ಅಡವಿಟ್ಟಿರುತ್ತಾರೆ ಎಂದು ಹೇಳಿರುತ್ತಾರೆ. ಸದರಿ ವಿ ಆರ್ ಎಸ್ ಫೈನಾನ್ಸ್ ನಲ್ಲಿ ಅಡವಿಟ್ಟಿದ್ದ ಚಿನ್ನದ ಸರ, ಬ್ರೇಸ್‌ಲೆಟ್, ಬಳೆ, ಕಿವಿಯೋಲೆ, ಮೂಗುತಿ ಸುಮಾರು 20-25 ಬಂಗಾರದ ಆಭರಣಗಳನ್ನು ಪೋಲಿಸರು

ವಶಪಡಿಸಿಕೊಂಡು ದಾಖಲೆಗೆ ನನ್ನ ಸಹಿ ಪಡೆದಿರುತ್ತಾರೆ. ಈ ಪ್ರಕರಣಕ್ಕೆ ಸಂಬಂಧಿಸಿದ ಈಗ ನ್ಯಾಯಾಲಯದ ಮುಂದಿರುವ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲು** ಃ ಆರೋಪಿ ಪರ ಃ ಶ್ರೀ ಕೆ ಬಿ ಎಸ್ ವಕೀಲರಿಂದ ಃ

3. ದಿಃ 14-12-2016 ರ ಪೂರ್ವದಲ್ಲಿ ನನಗೆ ಆರೋಪಿಯ ಪರಿಚಯ ಇರಲಿಲ್ಲ. ಪೋಲಿಸರು ಆರೋಪಿಯನ್ನು ದಿಃ 14-12-2016 ರ ಹತ್ತು ದಿನಗಳ ಪೂರ್ವದಲ್ಲಿ ಮಿಯಾರಿನ ಒಂದು ಮನೆಯಲ್ಲಿ ಕಳ್ಳತನ ಮಾಡಿದ ವಿಚಾರವಾಗಿ ಕರೆದುಕೊಂಡು ಬಂದಿದ್ದು, ಆಗ ಆರೋಪಿಯನ್ನು ನಾನು ನೋಡಿರುತ್ತೇನೆ. ಮಿಯಾರಿನಲ್ಲಿ ಯಾರಿಗೆ ಸಂಬಂಧಪಟ್ಟ ಮನೆ ಎಂದು ನನಗೆ ಗೊತ್ತಿಲ್ಲ. ಪೋಲಿಸರು ಆರೋಪಿಯನ್ನು ಪರಿಚಯ ಮಾಡಿಸಿರುತ್ತಾರೆ. ನಾನು ಬಾಡಿಗೆ ಕಾರಿನ ಚಾಲಕನಾದ ಕಾರಣ ಪೋಲಿಸರೊಂದಿಗೆ ಒಳ್ಳೆಯ ಒಡನಾಟದಲ್ಲಿ ಇದ್ದೇನೆ. ಆರೋಪಿಯ ವಿರುದ್ಧ ಇದೇ ನ್ಯಾಯಾಲಯದಲ್ಲಿ ದಾಖಲಿಸಿದ 4 ಪ್ರಕರಣಗಳಲ್ಲಿ ನಾನೇ ಸಾಕ್ಷಿದಾರನಾಗಿರುತ್ತೇನೆ ಎಂದರೆ ಸರಿ. ಪೋಲಿಸರು ಆರೋಪಿಯ ವಿರುದ್ಧ ಪ್ರಕರಣ ದಾಖಲಾಗಿರುತ್ತದೆ ಮತ್ತು ಪಂಚರಾಗಿ ತನಿಖೆಗೆ ಸಹಕರಿಸಬೇಕೆಂದು ಹೇಳಿ ನನ್ನನ್ನು ಕರೆದುಕೊಂಡು ಹೋಗಿರುತ್ತಾರೆ.

4. ಸುಧಾ ಜುವೆಲ್ಲರ್ಸ್ ಮಾಲಕ ಯಾರೆಂದು ನನಗೆ ಗೊತ್ತಿರುವುದಿಲ್ಲ. ಸುಧಾ ಜ್ಯುವೆಲ್ಲರ್ಸ್ ಅಂಗಡಿಯಲ್ಲಿ ಒಬ್ಬರು ಇದ್ದು, ಅವರು ಮಾಲಕರು ಎಂದು ಹೇಳಿರುತ್ತಾರೆ. ಸದರಿ ಅಂಗಡಿಯ ಸುತ್ತಮುತ್ತ ಸಾಕಷ್ಟು ಅಂಗಡಿಗಳು ಇವೆ. ಸದರಿ ಅಂಗಡಿಯಲ್ಲಿ ಒಂದು ಗಂಟೆ ಕಾಲ ಇದ್ದೆವು. ನಿಪಿ-8 ಮತ್ತು 9 ನ್ನು ಯಾರು ಬರೆದಿರುತ್ತಾರೆ ಎಂದು ಗೊತ್ತಿರುವುದಿಲ್ಲ. ಸದರಿ ಅಂಗಡಿಯ ಡೋರ್ ನಂಬರ್ ನನಗೆ ಗೊತ್ತಿರುವುದಿಲ್ಲ. ಪೋಲಿಸರು ಲೈಸೆನ್ಸನ್ನು ಪಡೆದುಕೊಂಡಿರುವುದನ್ನು ನಾನು ನೋಡಿರುವುದಿಲ್ಲ. ಪೋಲಿಸರು ಸುಮಾರು 15 ಐಟಮ್ ಗಳನ್ನು ವಶಪಡಿಸಿಕೊಂಡಿರುತ್ತಾರೆ. ನನಗೆ ಈಗ ಎಲ್ಲಾ ಐಟಂ ನೆನಪಿರುವುದಿಲ್ಲ. ನಿಪಿ-7 ಫೋಟೋದಲ್ಲಿರುವ ಆಭರಣಗಳನ್ನು ನೋಡಿ ಹೇಳಲು ಸಾಧ್ಯ ಇಲ್ಲ ಎಂದರೆ ನಿಖರವಾಗಿ ಹೇಳಲು ಆಗುವುದಿಲ್ಲ. 15 ಐಟಂ ಆಭರಣಗಳು ನಿಖರವಾಗಿ ಯಾವ ವಿನ್ಯಾಸದ್ದು ಎಂದು ಹೇಳಲು ಸಾಧ್ಯ ಇಲ್ಲ. ಸ್ವತ್ತು ಪಟ್ಟಿಯಲ್ಲಿ ಬರೆದಿರುವ ಬಗ್ಗೆ ಮತ್ತು ಮಾಲೀಕರಿಗೆ ನೀಡಿರುವ ಬಗ್ಗೆ ನನಗೆ ಗೊತ್ತಿರುವುದಿಲ್ಲ. ಪೋಲಿಸರು ಬರೆದ ಪ್ರಕಾರ ಯಾದಸ್ತಿಗೆ ನಾನು ಸಹಿ ಮಾಡಿರುತ್ತೇನೆ.

5. ನಂತರ ಮಂಗಳೂರಿನ ವಿ ಆರ್ ಎಸ್ ಫೈನಾನ್ಸ್ ಗೆ ಹೋಗಿರುತ್ತೇವೆ. ಸದರಿ ಫೈನಾನ್ಸಿನ ಮಾಲಕರು ಯಾರೊಂದು ನನಗೆ ಗೊತ್ತಿರುವುದಿಲ್ಲ. ವಿ ಆರ್ ಎಸ್ ಫೈನಾನ್ಸಿನಲ್ಲಿ ಸುಧಾಕರ ಆಚಾರ್ಯ ಎನ್ನುವವರು ಇದ್ದರು. ಅಂಗಡಿಯ ಡೋರ್ ನಂಬರ್ ಗೊತ್ತಿರುವುದಿಲ್ಲ. ಹತ್ತಿರದ ಸಾಕ್ಷಿಗಳನ್ನು ಕರೆದಿರುವುದಿಲ್ಲ. ವಿ ಆರ್ ಎಸ್ ಫೈನಾನ್ಸ್ ನಲ್ಲಿ ಒಂದು ಗಂಟೆ ತನಕ ಇದ್ದೆವು. ಎಲ್ಲಾ ಅಂಗಡಿಯಲ್ಲಿ ಸ್ವತ್ತುಗಳನ್ನು ಸ್ವಾಧೀನ ಪಡಿಸಿಕೊಂಡ ನಂತರ ಪೋಲಿಸ್ ಠಾಣೆಗೆ ಬಂದು ಪೋಲಿಸ್ ಠಾಣೆಯಲ್ಲಿ ನನ್ನ ಸಹಿ ಪಡೆದಿರುತ್ತಾರೆ. ಪೋಲಿಸರ ಒತ್ತಾಯಕ್ಕೆ ಮಣಿದು ದಾಖಲೆಗೆ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಫೋಟೋವನ್ನು ಫೈನಾನ್ಸ್ ನಲ್ಲಿ ತೆಗೆದಿರುತ್ತಾರೆ. ನಾನು ಪೋಲಿಸರೊಂದಿಗೆ ಯಾವುದೇ ಫೈನಾನ್ಸ್ ಮತ್ತು ಜುವೆಲ್ಲರಿಗೆ ಹೋಗಿರುವುದಿಲ್ಲ ಹಾಗೂ ಪೋಲಿಸರು ಅಲ್ಲಿ ಯಾವುದೇ ಸ್ವತ್ತುಗಳನ್ನು ವಶಪಡಿಸಿಕೊಂಡಿರುವುದಿಲ್ಲ ಮತ್ತು ನಾನು ಯಾವುದೇ ದಾಖಲೆಗೆ ಸಹಿ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿಗೂ ಭಾವಚಿತ್ರದಲ್ಲಿ ಕಾಣಿಸಿದ ಮು ಮಾ ಗೂ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆ : ಇಲ್ಲ

ನನ್ನ ಉಕ್ತಲೇಖನಾ ರೀತ್ಯಾ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓದಿ ಹೇಳಿ ಕೇಳಿ ಸರಿ ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾ.ದಂ. ಕಾರ್ಕಳ